ಅ) ಹಾಗಿದ್ದಲ್ಲಿ ಈ ಯೋಜನೆಯನ್ನು ಗ್ರಾಮಾಂತರ ಪ್ರದೇಶದಲ್ಲಿ ಯಾವಾಗಿನಿಂದ ಪ್ರಾರಂಭಿಸಲಾಗುವುದು ?

ಇ) ಈ ಯೋಜನೆಯನ್ನು ಧಾರವಾಡ ಜಿಲ್ಲೆಯಂ, ರೋಣ ತಾಲ್ಲೂಕಿನಲ್ಲಿ ಪ್ರಾರಂಭಿಸಲಂ ಮನವಿ ಬಂದಿರುವುದಂ ಸರಕಾರದ ಗಮನಕ್ಕೆ ಬಂದಿದೆಯೆ ?

ಈ) ಹಾಗಾದರೆ ಈ ಯೋಜನೆಯನ್ನು ಯಾವಾಗಿನಿಂದ ಪ್ರಾರಂಭಿಸಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನಂ, ಸಂಸದೀಯ ವ್ಯವಹಾರ, ಆಹಾರ ಮಂತ್ರಿ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಬಂದಿದೆ.

ಈ) ಅ) ಪ್ರಶ್ನೆಯ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಬೆಳವಡಿ ಗ್ರಾಮದಲ್ಲಿ ಬಸ್ ಸ್ಟಾ ್ಯಂಡ್ ಕಟ್ಟುವ ಬಗ್ಗೆ

೬೪೮. ಶ್ರೀ ಶಿವಾನಂದ ಹೆಚ್. ಕೌಜಲಗಿ, (ಬೈಲಹೊಂಗಲ).—ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಬೆಳವಡಿ ಗ್ರಾಮದಲ್ಲಿ ಬಸ್ ನಿಲ್ದಾಣದ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಅದನ್ನು ಕಟ್ಟಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು ?

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮಂತ್ರಿ ಬಂದೀಖಾನೆ ರಾಜ್ಯ ಮಂತ್ರಿಗಳು).—

ಅ) ಬೆಳವಡಿಯಲ್ಲಿ ಒದಗಿಸಲಾಗಿರುವ ಪ್ರಯಾಣಿಕರ ತಂಗು ನಿಲ್ದಾಣವು ಸಾಕಾಗುವುದರಿಂದ ಅಲ್ಲಿ ಬಸ್ ಸ್ಟೇಷನ್ ನಿರ್ಮಾಣದ ಅವಶ್ಯಕತೆಯಿಲ್ಲ.

ಆ) ಉದ್ಭವಿಸುವುದಿಲ್ಲ.

ಬೆಳಗಾವಿ ಜಿಲ್ಲೆಯಲ್ಲಿ ಹೊಸ ಬಸ್ ಸ್ಟಾ ್ಯಂಡ್ ಕಟ್ಟಡ ನಿರ್ಮಾಣದ ಬಗ್ಗೆ

೪೨೫. ಶ್ರೀ ಮಲ್ಲಾರಿಗೌಡ. ಎಸ್. ಪಾಟೀಲ್. (ಸಂಕೇಶ್ವರ).—ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂಧೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಹೊಸ ನಿಲ್ದಾಣದ ಕಟ್ಟಡಕ್ಕಾಗಿ ಮಂಜೂರು ಮಾಡಿರುವ ಹಣದ ಮೊತ್ತವೆಷ್ಟು ಹಾಗೂ ಸ್ಥಳಗಳ ಹೆಸರು ಏನು ?

ಆ) ಮಂಜೂರಾಗಿರುವ ಬಸ್ ನಿಲ್ದಾಣದ ಕಟ್ಟಡಗಳು ಪೂರ್ಣಗೊಂಡಿರುವ ಸ್ಥಳಗಳ ಹೆಸರುಗಳೇನು ?

ಇ) ಬಸ್ ನಿಲ್ದಾಣ ಕಟ್ಟಡಗಳು ಮಂಜೂರಾಗಿ ಭೂಸ್ವಾಧೀನತೆಯನ್ನು ಶೀಘ್ರತೆಯಿಂದ ಮಾಡಿಕೊಳ್ಳದೆ ನಿಲ್ದಾಣದ ಕಟ್ಟಡ ನಿರ್ಮಾಣದಲ್ಲಿ ತೊಂದರೆಗೊಳಪಟ್ಟಿರುವ ಸ್ಥಳಗಳ ಹೆಸರೇನು ?

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ಮಂತ್ರಿಗಳು).—

ಅ) ೧. ನೇಸರ್ಗಿ ೧.೮೪ ಲಕ್ಷ ರೂಪಾಯಿಗಳು
೨. ಹತ್ತರ್ಗಿ ೪.೨೦ ಲಕ್ಷ ರೂ. ಗಳು
೩. ಖಾನಾಪುರ ೪.೦೦ ಲಕ್ಷ ರೂ. ಗಳು
೪. ಸದಲ್ಗ ೪.೦೦ ಲಕ್ಷ ರೂ. ಗಳು
೫. ರಾಯಬಾಗ ೫.೩೫ ಲಕ್ಷ ರೂ. ಗಳು

ಒಟ್ಟು ಮೊತ್ತ ೧೯. ೩೯ ಲಕ್ಷ ರೂ. ಗಳು

ಆ) ೧. ನೇಸರ್ಗಿ ಮತ್ತು
೨. ಹತ್ತರ್ಗಿ.

ಇ) ಇಲ್ಲ.

ಮಂಧೋಳ ತಾಲ್ಲೂಕಿನಲ್ಲಿ ಪಿ. ಹೆಚ್. ಯ, ಮಂಜೂರ ಬಗ್ಗೆ

೭೬೪ ಶ್ರೀ ಬಿ. ಜಿ. ಜವಳಿ (ಮಂಧೋಳ).—ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೫-೮೬ರಲ್ಲಿ ಮುಧೋಳ ತಾಲ್ಲೂಕಿನಲ್ಲಿ ಮಂಜೂರಾದ ಸಾರ್ವಜನಿಕ ಆರೋಗ್ಯ ಘಟಕಗಳ ಸಂಖ್ಯೆ ಎಷ್ಟು ?

ಆ) ಅವು ಯಾವ ಊರಿನಲ್ಲಿ ಮಂಜೂರು ಆಗಿವೆ?

ಇ) ಹೊಗಿದ್ದಲ್ಲಿ ಕೆಲಸ ಪ್ರಾರಂಭವಾಗದೇ ಇರಲು ಕಾರಣಗಳೇನು?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು).—

ಅ) ಯಾವುದೂ ಮಂಜೂರಾಗಿಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ

ಪರಿಶಿಷ್ಟ ಜಾತಿಯ ನೌಕರರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ

೯೬೫ ಎಂ. ಪಿ. ಕೇಶವಮೂರ್ತಿ (ಆನೇಕಲ್).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿಂವರೆ?

ಅ) ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯಾಲಯದಲ್ಲಿ ಕೆಲಸ ಮಾಡುತ್ತಿರುವ 'ಬಿ, ಮತ್ತು 'ಸಿ' ವರ್ಗಕ್ಕೆ ಸೇರಿದ ನೌಕರರೆಷ್ಟು, ಅವರುಗಳಲ್ಲಿ ಕೆಲಸ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ನೌಕರರುಗಳೆಷ್ಟು;

ಆ) ಕ್ಯಾಬಿನೆಟ್ ದರ್ಜೆ ಮಂತ್ರಿಗಳು ಮತ್ತು ರಾಜ್ಯ ಮಂತ್ರಿಗಳ ಆಪ್ತ ಶಾಖೆಗಳಲ್ಲಿ 'ಸಿ' ಗುಂಪಿಗೆ ಸೇರಿದ ನೌಕರರುಗಳೆಷ್ಟು ಅವರುಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದವರೆಷ್ಟು?

ಇ) ಮಾನ್ಯ ಮುಖ್ಯ ಮಂತ್ರಿಗಳ ಆಪ್ತ ಶಾಖೆಗಳು ಸೇರಿದಂತೆ ಎಲ್ಲಾ ಮಂತ್ರಿಗಳ ಆಪ್ತ ಶಾಖೆಗಳಲ್ಲಿ 'ಸಿ' ಗುಂಪಿಗೆ ಸೇರಿದ ಒಬ್ಬ ಪರಿಶಿಷ್ಟ ಜಾತಿಯ ನೌಕರರನ್ನು ಕಡ್ಡಾಯವಾಗಿ ನೇಮಕ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?